# ತನುವ ನಂಬಲುಬೇಡ ಜೀವವೆ

1. **Ref.:** Shri Purandara Dasara Sahitya Part – 5, Loka Neeti, edited by Shri Betageri Krishna Sharma and Shri Bengeri Huchha Rayaru, page No. 14.
2. **Ref.:** Samagra Dasa Sahitya, Samputa 3.2 published by Kannada & Culture Dept, Govt of Karnataka, Bengaluru, page No. 154.
3. **Note:** This song is not available in the books of Prof. S.K. Ramachandra Rao and also in the books of Sri. Pavanje Guru Rao and also in the books of Gorebala Hanumantha Rayaru.
4. **Note:** Lyrics given here are as per Ref. 1. The wordings in Ref. 2 are same as in Ref. 1.
5. **Note:** Singer has followed these lyrics.

ರಾಗ: ದರ್ಬಾರ್ ತಾಳ: ಆದಿ

ತನುವ ನಂಬಲುಬೇಡ ಜೀವವೆ ॥ ಪ ॥

ಅನುವಾಗಿ ನಿನ್ನಂಗಕೆ ಕೆಲಕಾಲ ತೋರುವುದು
ಅನುವಿಲ್ಲದಾಗ ಈ ತನುವೆ ನಿನಗೆ ವೈರಿ ॥ ಅಪ ॥

ಜರೆ - ಮರಣಗಳಿಂದ ಭರಿತವಾದುದು ಕಾಯ
ಸ್ಥಿರವೆಂದು ನಂಬಿ ನೀ ಮರುಳಾಗಬೇಡ ॥ 1 ॥

ಧನ-ಧಾನ್ಯ ಪಶು-ಪತ್ನಿ ಸ್ಥಿರವೆಂದು ತಿಳಿದು
ಮನುಮಥನಯ್ಯನ ಮರೆಯದೆ ಮನವೆ ॥ 2 ॥

ಶರಣೆಂದರೆ ಕಾವ ಗರುಡಕೇತನ ನಮ್ಮ
ಪುರಂದರ ವಿಠಲನ ಮರೆಯದೆ ಮನವೆ ॥ 3 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಸಾಮಾನ್ಯ ಮನುಷ್ಯನು ದೇಹಾತ್ಮವಾದಿ. ದೇಹವೇ ತಾನು ಅದರ ಸುಖವೇ ತನ್ನ ಸುಖ ಎಂದು ನಂಬುವನು. ಆದರೆ ಹರಿಭಕ್ತಿ ಸಾಧಕನಿಗೆ ಇದು ಪೂರ್ತಿ ನಿಷಿದ್ಧ. ದೇಹ ನಶ್ವರತೆಯನ್ನು ಅವನು ಪೂರ್ತಿಯಾಗಿ ಮನಗಾಣಲೇಬೇಕು.

1. **ಅನುವಾಗಿ** = ಅನುಕೂಲವಾಗಿ
3. **ಗರುಡಕೇತನ** = ಗರುಡ ಧ್ವಜ

**Classification:** Keerthane
**Ankita:** purandara vittala
**Location:** NA
**Category:** Loka Neeti,
**Sub-Category:** deha, niru, jiva, shatru, huttu, marana, rokka, dhAnya, mana, Vishnu, sharana, garuda, Narayana, patni
**Pravachana:** NA
**Explanation:** NA